MESCOM-GMAH0PER/19/2021-GM ADM HR

I/43037/2023


# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಕಾರ್ಪೋರೇಟ್ ಕಛೇರಿ, 'ಮೆಸ್ಕಾಂ ಭವನ',ಕಾವೂರು ಅಡ್ಡ ರಸ್ತೆ.P.B.No. 1130,

ಬಿಜೈ ಮಂಗಳೂರು – 575004.

e-mail : **agmpersnl_mescom @ rediffmail.com**, Website : www.mescom.karnataka.gov.in

CIN.: U40109 KA 2002 SGC 030425


ಸಂಖ್ಯೆ: ದಿನಾಂಕ : 10.04.2023

ಲಗತ್ತು:

## ಕಛೇರಿ ಆದೇಶ

**ವಿಷಯ:** ಮವಿಸಕಂ.,ನಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಖಾಯಂ ಅಧಿಕಾರಿ/ ನೌಕರರ/ ಹೊಸದಾಗಿ ಸೇರ್ಪಡೆಗೊಂಡ/ ವರ್ಗಾವಣೆಗೊಂಡು ಬಂದಿರುವ ಖಾಯಂ ಅಧಿಕಾರಿ/ನೌಕರರ ಹಾಗೂ ನಿಯೋಜನೆ ಮೇರೆಗೆ ಬಂದಿರುವ ಅಧಿಕಾರಿ/ನೌಕರರ ವೈಯುಕ್ತಿಕ ಗುಂಪು ವಿಮಾ ಯೋಜನೆಯನ್ನು 2023-24 ನೇ ಸಾಲಿಗೆ ನಿರ್ವಹಿಸುವ ಬಗ್ಗೆ.

**ಉಲ್ಲೇಖ:**

1. ನಿರ್ದೇಶಕರು (ಆ&ಮಾಸಂ) ಕವಿಪ್ರನಿನಿ ಕಾವೇರಿ ಭವನ, ಬೆಂಗಳೂರುರವರ ಪತ್ರಾಂಕ ಕವಿಪ್ರನಿನಿ/ಔಬಾ/ಹಿಸ7/11153 / 09-10 ದಿನಾಂಕ 26.12.2013.
2. ಈ ಕಛೇರಿ ಪತ್ರ ಸಂಖ್ಯೆ :MESCOM-GMAHOPER/19/2021-GM ADM HR-I/33442/2023 ದಿನಾಂಕ:11.01.2022.
3. ಈ ಕಛೇರಿ ಸುತ್ತೋಲೆ ಸಂಖ್ಯೆ:MESCOM-GMAHOPER/19/2021-GM ADM HR-I/18274/2022 ದಿನಾಂಕ:27.05.2022.
4. Resolution passed in 95th Board of Directors Meeting held on 21.03.2023.
5. ಈ ಕಛೇರಿ ಕಾರ್ಯಾದೇಶ ಸಂಖ್ಯೆ:MESCOM- GMAHOPER/19/2021-GMADMHR/1326/2023 ದಿನಾಂಕ:24.03.2023.

*****

**ಪೀಠಿಕೆ:**

ಅ. ಮವಿಸಕಂನಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ನೌಕರರು/ ಅಧಿಕಾರಿಗಳಿಗೆ ವೈಯಕ್ತಿಕ ಗುಂಪು ವಿಮಾ ಯೋಜನೆಯನ್ನು ಜಾರಿಗೊಳಿಸಿದ್ದು, 2022-23 ನೇ ಸಾಲಿನಲ್ಲಿ ಈ ಯೋಜನೆಯು ದಿನಾಂಕ 27.03.2023 ರಂದು ಅಂತ್ಯಗೊಳ್ಳುತ್ತದೆ. ಸದರಿ ಯೋಜನೆಯಡಿಯಲ್ಲಿ ಅಪಘಾತದಿಂದ ಮರಣ/ಅಶಕ್ತತೆ ಹೊಂದಿದ ನೌಕರರು/ಅಧಿಕಾರಿಗಳಿಗೆ ಹಾಗೂ ಅವಲಂಬಿತರಿಗೆ ರೂ.40.00 ಲಕ್ಷ ವಿಮಾ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

ಆ. ದಿನಾಂಕ 27.03.2023 ರಂದು ಕೊನೆಗೊಳ್ಳುವ ವೈಯಕ್ತಿಕ ಗುಂಪು ವಿಮಾ ಯೋಜನೆಯನ್ನು ಪುನಃ 2023-24 ನೇ ಸಾಲಿಗೆ ಹೊಸದಾಗಿ M/s NEW INDIA ASSURANCE COMPANY LIMITED ಇವರಿಗೆ ನೀಡಲು, 95 ನೇ Board Resolution ನಲ್ಲಿ ಅನುಮೋದನೆ ನೀಡಲಾಗಿದ್ದು, ಅದರಂತೆ ಸದರಿ ಯೋಜನೆಯನ್ನು 2023-24 ನೇ ಸಾಲಿಗೆ ವಿಸ್ತರಿಸಲಾಗಿದೆ.

I/43037/2023 M/s NEW INDIA ASSURANCE COMPANY LIMITED ಇವರಿಗೆ ವಾರ್ಷಿಕ ವೈಯಕ್ತಿಕ ಪ್ರೀಮಿಯಂ ದರ (ತೆರಿಗೆಗಳನ್ನು ಸೇರಿಸಿ) ಒಟ್ಟು ರೂ. 3,27,68,600/- (ರೂಪಾಯಿ ಮೂರು ಕೋಟಿ ಇಪ್ಪತ್ತೇಳು ಲಕ್ಷದ ಅರ್ವತ್ತೆಂಟು ಸಾವಿರದ ಆರು ನೂರು ಮಾತ್ರ) ನ್ನು ಪಾವತಿಸಿ ಗುಂಪು ವಿಮಾ ಯೋಜನೆಯಡಿಯಲ್ಲಿ ಒಡಂಬಡಿಕೆ ಮಾಡಿಕೊಂಡಿರುವುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ.

ಆದೇಶ ಸಂಖ್ಯೆ: MESCOM-GMAHOPER/19/2021-GMADM HR/I/43037/2023 ದಿನಾಂಕ : 10.04.2023

1. ಮವಿಸಕಂನಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿ/ನೌಕರರ ಪರವಾಗಿ M/s NEW INDIA ASSURANCE COMPANY LIMITED ಇವರಿಗೆ ವಾರ್ಷಿಕ ವಿಮೆಯ ಪ್ರೀಮಿಯಂ ಮೊತ್ತ ಒಟ್ಟು ರೂ. 3,27,68,600/- (ರೂಪಾಯಿ ಮೂರು ಕೋಟಿ ಇಪ್ಪತ್ತೇಳು ಲಕ್ಷದ ಅರ್ವತ್ತೆಂಟು ಸಾವಿರದ ಆರು ನೂರು ಮಾತ್ರ) ನ್ನು (ತೆರಿಗೆ ಒಳಗೊಂಡಂತೆ) ಕಂಪನಿ ವತಿಯಿಂದ ಪಾವತಿ ಮಾಡಲಾಗಿದ್ದು, ನಂತರ ಇದರಲ್ಲಿ ಶೇಕಡಾ 50 ಅಂದರೆ ರೂ.2,950/- (ರೂಪಾಯಿ ಎರಡು ಸಾವಿರದ ಒಂಬೈನೂರ ಐವತ್ತು ಮಾತ್ರ) (ತೆರಿಗೆ ಒಳಗೊಂಡಂತೆ) ಮೊತ್ತವನ್ನು ಆಯಾ ಅಧಿಕಾರಿ/ನೌಕರರ (ಗುಂಪು ವಿಮೆಗೆ ಒಳಪಡಿಸಿರುವ) ಎಪ್ರಿಲ್ 2023ರ ಮಾಹೆಯ ವೇತನದಲ್ಲಿ ಕಡಿತಗೊಳಿಸುವುದು.
2. ಮುಂದುವರೆದು, ಪ್ರಸ್ತುತ ಈಗಾಗಲೇ ಸಲ್ಲಿಸಿರುವ ವಿವರಗಳನ್ನು ಹೊರತು ಪಡಿಸಿ (Policy copy ಯನ್ನು ಇ-ಮೇಲ್ ಮೂಲಕ ಕಳುಹಿಸಲಾಗಿದೆ) ಕಂಪೆನಿ ಸೇವೆಗೆ ಹೊಸದಾಗಿ ಸೇರ್ಪಡೆಗೊಂಡ/ ಸೇರ್ಪಡೆಗೊಳ್ಳುವ, ವರ್ಗಾವಣೆಗೊಂಡ / ವರ್ಗಾವಣೆಗೊಳ್ಳುವ ಹಾಗೂ ನಿಯೋಜನೆ ಮೇರೆಗೆ ಬಂದಿರುವ/ಬರುವ ಖಾಯಂ ಅಧಿಕಾರಿ/ ನೌಕರರನ್ನು ಕಡ್ಡಾಯವಾಗಿ ಗುಂಪು ವಿಮಾ ಯೋಜನೆಗೆ ಒಳಪಡಿಸುವುದು. ಗುಂಪು ವಿಮಾ ಯೋಜನೆಗೆ ಸೇರ್ಪಡೆಗೊಳಿಸಲು ಸಂಬಂಧಪಟ್ಟ ವೇತನ ಬಡವಾಡೆ ಅಧಿಕಾರಿ/ನೌಕರರು, ಗುಂಪು ವಿಮಾ ಕಂಪೆನಿಯನ್ನು ಸಂಪರ್ಕಿಸಿ ದಾಮಾಷ ಮೇರೆಗೆ ಪ್ರೀಮಿಯಂ (Prorata Premium) ದರವನ್ನು ಪಡೆದು, ತಮ್ಮ ಕಛೇರಿ ವತಿಯಿಂದ ನೇರವಾಗಿ ಈ ಕೆಳಗೆ ತಿಳಿಸಿರುವ ವಿಮಾ ಕಂಪೆನಿಯ ಖಾತೆಗೆ ಪಾವತಿಸಿ. ಮತ್ತು ಲಗತ್ತಿಸಿರುವ ಅನುಬಂಧದಲ್ಲಿ ಅಧಿಕಾರಿ/ನೌಕರರ ವಿವರವನ್ನು ವಿಮಾ ಕಂಪೆನಿಗೆ ಸಲ್ಲಿಸುವುದು. ಅಧಿಕಾರಿ/ನೌಕರರನ್ನು ವಿಮಾ ಯೋಜನೆಗೆ ಒಳಪಡಿಸುವುದು ಸಂಬಂಧಪಟ್ಟ ವೇತನ ಬಟವಾಡೆ ಅಧಿಕಾರಿ/ ನೌಕರರ ಜವಾಬ್ದಾರಿಯಾಗಿರುತ್ತದೆ. ಒಂದು ವೇಳೆ ಒಳಪಡಿಸದೇ ಇದ್ದಲ್ಲಿ ಮುಂದೆ ಆಗುವ ಪರಿಣಾಮಗಳಿಗೆ ಸಂಬಂಧಪಟ್ಟ ವೇತನ ಬಟವಾಡೆ ಅಧಿಕಾರಿ/ ನೌಕರರೇ ಜವಾಬ್ದಾರರಾಗಿರುತ್ತಾರೆ.

   Account Holder : THE NEW INDIA ASSURANCE CO. LTD
   BANK NAME: UNION BANK OF INDIA
   Type of Acount :CURRENT ACCOUNT
   ACCOUNT NUMBER:510341000001691
   IFSC CODE: UBIN0901211
   Davangere

3. ಸದರಿ ಯೋಜನೆಯ ಅನುಸಾರ ಅಪಘಾತ ಮರಣ/ ಅಶಕ್ತತೆ ಸಂಭವಿಸಿದಾಗ ಸಂಬಂಧಿಸಿದ ವೇತನ ಬಟವಾಡೆಯ ಕಛೇರಿಯ ಅಧಿಕಾರಿಗಳು 24 ಗಂಟೆಯೊಳಗೆ ವಿಮಾ ಕಂಪೆನಿಗೆ ವರದಿ ಮಾಡುವುದು ಮತ್ತು ವಿಮಾ ಕ್ಲೈಮನ್ನು ವಿಳಂಬವಿಲ್ಲದೆ ನೇರವಾಗಿ M/s NEW INDIA ASSURANCE COMPANY LIMITED 289/12 CG Hospital Road, AM Arcade, 2nd Floor, Davangere - 577002 ರವರಿಗೆ ಸಲ್ಲಿಸಿ ಕಾರ್ಪೊರೇಟ್ ಕಛೇರಿಗೆ ವರದಿ ಮಾಡುವುದು.

MESCOM-GMAH0PER/19/2021-GM ADM HR

/43037/2023

Personal Accident Insurance Calim form ನ ಪ್ರತಿಯನ್ನು ಮಾಹಿತಿಗೆ ಲಗತ್ತಿಸಲಾಗಿದೆ. ಮತ್ತು ಹೆಚ್ಚಿನ ಮಾಹಿತಿಗೆ ಕೆಳಕಂಡ ಮೊಬೈಲ್ ಸಂಖ್ಯೆಯನ್ನು ಸಂಪರ್ಕಿಸಬಹುದಾಗಿರುತ್ತದೆ.

Sri. D Balakrishna, Senior Divisional Manager – 9845820760

Akash - 9482003304

E-Mail ID – d.balakrishnan@newindia.co.in

akash.40879@newindia.co.in

"ಮಾನ್ಯ ವ್ಯವಸ್ಥಾಪಕ ನಿರ್ದೇಶಕ ರವರಿಂದ ಅನುಮೋದಿಸಲ್ಪಟ್ಟಿದೆ."

ಪ್ರಧಾನ ವ್ಯವಸ್ಥಾಪಕರು **(ಆ&ಮಾ.ಸಂ.ಅ)**
ಮ.ವಿ.ಸ.ಕಂ, ಮಂಗಳೂರು.

ಪ್ರತಿಗಳು:

1. ಮುಖ್ಯ ಇಂಜಿನಿಯರ್ (ವಿ), ಮ.ವಿ.ಸ.ಕಂ, ವಲಯ ಕಛೇರಿ, ಮಂಗಳೂರು/ಶಿವಮೊಗ್ಗ.
2. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ), ಮ.ವಿ.ಸ.ಕಂ, ಕಾರ್ಪೊರೇಟ್ ಕಚೇರಿ ಮಂಗಳೂರು.
3. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ), ಮ.ವಿ.ಸ.ಕಂ, ಕಾ ಮತ್ತು ಪಾ ವೃತ್ತ.
4. ಸಹಾಯಕ ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾಸಂಅ), ಮ.ವಿ.ಸ.ಕಂ, ಕಾರ್ಪೊರೇಟ್ ಕಚೇರಿ ಮಂಗಳೂರು.
5. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಮ.ವಿ.ಸ.ಕಂ, ಕಾ ಮತ್ತು ಪಾ ವಿಭಾಗ.
6. ಲೆಕ್ಕಾಧಿಕಾರಿ (ಆಂ.ಪ)/ (ಆಡಳಿತ), (ಹುಂಡಿಗಳು) & (ಹಣಕಾಸು), ಮ.ವಿ.ಸ.ಕಂ, ಕಾರ್ಪೊರೇಟ್ ಕಚೇರಿ ಮಂಗಳೂರು.
7. ಮುಖ್ಯ ಕಡತ.